

# ಜ್ಯೋತಿರ್ಮಯಿ ಜೆ.ಟಿ.

ಹೈವ್ ಮೈಂಡ್ಸ್ ಇನ್ನೋವೇಟಿವ್ ಮಾರ್ಕೆಟಿಂಗ್ ಸಲ್ಯೂಷನ್ಸ್‌ನ ಸ್ಥಾಪಕ ಸಿಇಓ ಜ್ಯೋತಿರ್ಮಯಿ ಅವರ ಬದುಕಿನಲ್ಲಿ ಕೊನೆಯ ಕ್ಷಣದ ತಿರುವುಗಳೇ ಹೆಚ್ಚು. ಸಿಇಟಿಯ ಕೌನ್ಸೆಲಿಂಗ್ ಸಮಯದಲ್ಲೂ ಅದು ಸಂಭವಿಸಿತ್ತು. ಸುರತ್ಕಲ್‌ನ ಎನ್ಐಟಿಯಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್‌ಗೆ ಸೀಟು ಸಿಕ್ಕಿತ್ತು. ಆದರೆ ಜ್ಯೋತಿರ್ಮಯಿ ಬೇಕಿದ್ದದ್ದು ಕಂಪ್ಯೂಟರ್ ಸೈನ್ಸ್. ಅದನ್ನು ದಾಖಲಿಸುವಷ್ಟರಲ್ಲಿ ಕಂಪ್ಯೂಟರ್ ಸ್ಕ್ರೀನ್ ಖಾಲಿಯಾಗಿಬಿಟ್ಟಿತು. ಸಮಯ ಮೀರಿತು, ಸೀಟು ಸಿಗಲಿಲ್ಲ. ಅಥವಾ ಹೆಚ್ಚಿನ ಪ್ರಯತ್ನ ಮಾಡುವುದು ಹೇಗೆಂದು ಅವರಿಗೂ ತಿಳಿಯಲಿಲ್ಲ. ಜೊತೆಗಿದ್ದ ಪಾಲಕರಿಗೂ ಗೊತ್ತಿರಲಿಲ್ಲ. ಪರಿಣಾಮವಾಗಿ ಆಗ ಹೆಚ್ಚಿನವರಿಗೆ ಗೊತ್ತಿಲ್ಲದ ಅದೂ ಕಂಪ್ಯೂಟರ್ ಸೈನ್ಸ್‌ನಂಥದ್ದೇ ಎಂದು ಹೇಳುತ್ತಿದ್ದ 'ಇನ್ಫಾರ್ಮೇಷನ್ ಸೈನ್ಸ್' ಆರಿಸಿಕೊಂಡು ಪಿಇಎಸ್ ಕಾಲೇಜು ಸೇರಿದರು.

ತೀರಾ ಇತ್ತೀಚೆಗೂ ಇದು ಸಂಭವಿಸಿತು. ಜಾಹೀರಾತು ಕ್ಷೇತ್ರದ ದಂತಕತೆ, ಮ್ಯಾಡಿಸನ್ ಬಳಗ ಅಧ್ಯಕ್ಷ ಹಾಗೂ ಮುಖ್ಯ ಕಾರ್ಯನಿರ್ವಾಹಕ ಸ್ಯಾಮ್ ಬಲ್ಸಾರ ಅವರನ್ನು ಭೇಟಿ ಮಾಡುವ ದಿನವದು. ದೊಡ್ಡ ನಿರ್ಧಾರವಾಗಬೇಕಿದ್ದ ದಿನ. ಹೈವ್ ಮೈಂಡ್ಸ್‌ನ ಭವಿಷ್ಯ ನಿರ್ಧಾರವಾಗಬೇಕಿದ್ದ ದಿನ. ಸ್ಯಾಮ್ ಬೆಂಗಳೂರಿನ ಟ್ರಾಫಿಕ್‌ನಲ್ಲಿ ಸಿಕ್ಕಿಬಿದ್ದಿದ್ದರು. ಜ್ಯೋತಿರ್ಮಯಿ ಉದ್ವಿಗ್ನತೆಯಲ್ಲಿ ಕಾಯುತ್ತಿದ್ದರು. ಕೊನೆಯ ಕ್ಷಣದ ಬದಲಾವಣೆಗಳೇನೂ ಆಗಲಿಲ್ಲ. ಹೈವ್ ಮೈಂಡ್ಸ್‌ನಲ್ಲಿ ಮ್ಯಾಡಿಸನ್ ಬಳಗ ದೊಡ್ಡ ಹೂಡಿಕೆ ಮಾಡಿತು. ಜ್ಯೋತಿರ್ಮಯಿ ಈಗಲೂ ಅದರ ಸಿಇಓ ಆಗಿ ಮುಂದುವರಿದಿದ್ದಾರೆ.

ತುಮಕೂರು ಜಿಲ್ಲೆಯ ಜೆ.ಸಿ. ಪುರ ಎಂದೇ ಹೆಸರಾಗಿರುವ ಜಯಚಾಮರಾಜಪುರ ಮೂಲದ ಜ್ಯೋತಿರ್ಮಯಿ ಬೆಳೆದದ್ದು ಅಮ್ಮಸಂದ್ರದಲ್ಲಿ. ವಿದ್ಯಾಭ್ಯಾಸ ನಡೆದದ್ದೂ ಅಲ್ಲಿಯೇ. ತಂದೆ ತ್ರಿಶೂಲಮೂರ್ತಿ ಮತ್ತು ತಾಯಿ ಸಿದ್ಧಗಂಗಮ್ಮ ಇಬ್ಬರೂ ಶಿಕ್ಷಕರು. ಆಮೇಲೆ ಎಂಜಿನಿಯರಿಂಗ್‌ಗಾಗಿ ಬೆಂಗಳೂರಿಗೆ ಬಂದರು. ಆದರೆ ಈಗಲೂ ಅದೇ ಹಳ್ಳಿಗಾಡಿನ ಹುಡುಗಿಯ ಧೈರ್ಯ ಅವರಲ್ಲಿದೆ. ಸಮಕಾಲೀನರೆಲ್ಲ ಉದ್ಯೋಗಕ್ಕಾಗಿ ಕಂಪನಿಗಳತ್ತ ನೋಡುತ್ತಿದ್ದೆ ಜ್ಯೋತಿರ್ಮಯಿ ಮಾತ್ರ ತಮ್ಮದೇ ಕಂಪನಿಯ ಕನಸು ಕಂಡವರು. ಆ ಕನಸಿನ ಸಾಕಾರಕ್ಕಾಗಿಯೇ ದೂರದ ನೋಯ್ಡಾಕ್ಕೆ ಹೋಗಿ 'ರಿವ್ಯೂಜಿಸ್ಟ್' ಎಂಬ ಸಂಸ್ಥೆಯನ್ನು ಗೆಳೆಯರೊಂದಿಗೆ ಸೇರಿ ಸ್ಥಾಪಿಸಿದರು. ಆದರೆ ಅದು ನಿರೀಕ್ಷೆಯಂತೆ ನಡೆಯಲಿಲ್ಲ. ಆದರೆ ಅವರು ಉತ್ಸಾಹ ಕಳೆದುಕೊಳ್ಳಲಿಲ್ಲ. ವಿವಿಧ ಕಂಪನಿಗಳಲ್ಲಿ ಸಲಹೆಗಾರರಾಗಿ ದುಡಿದು ಮತ್ತೆ ತಮ್ಮದೇ ಕನಸಿನ ಸಾಕಾರಕ್ಕೆ ಹೊರಟರು. ಹಾಗೆ ರೂಪುಗೊಂಡದ್ದು ಹೈವ್ ಮೈಂಡ್ಸ್. 2010ರಲ್ಲಿ ಚಾಮರಾಜಪೇಟೆಯ ಸಣ್ಣ ಕೊಠಡಿಯಲ್ಲಿ ಆರಂಭಗೊಂಡ ಸಂಸ್ಥೆ ಈಗ ದೊಡ್ಡದಾಗಿ ಬೆಳೆದಿದೆ. 2018ರ ಗೂಗಲ್ ಪ್ರೀಮಿಯರ್ ಪಾರ್ಟನರ್ ಪ್ರಶಸ್ತಿ ಲಭಿಸಿದೆ. ಮುಂದಿನ ಏಳೇ ವರ್ಷಗಳಲ್ಲಿ ಅದರ ಬೆಳವಣಿಗೆಯ ವೇಗ ಹೇಗಿತ್ತೆಂದರೆ ಜಾಹಿರಾತು ಜಗತ್ತಿನ ದಂತಕತೆಯೇ ಹೂಡಿಕೆಗೆ ಮುಂದೆ ಬರುವಷ್ಟು!

ಮಾಹಿತಿ ವಿಜ್ಞಾನವನ್ನು ಅಧ್ಯಯನ ಮಾಡಿರುವ ಜ್ಯೋತಿರ್ಮಯಿ ತಮ್ಮ ಕಂಪನಿಯನ್ನೂ ಮಾಹಿತಿ ಆಧಾರಿತ ಸೇವೆಗಳನ್ನು ಮನಸ್ಸಿನಲ್ಲಿಟ್ಟುಕೊಂಡೇ ಸ್ಥಾಪಿಸಿದರು. ಹೈವ್ ಮೈಂಡ್ಸ್ ಆರಂಭಗೊಂಡದ್ದು ಈ ಬಗೆಯ ಡೇಟಾ ಪ್ರಾಡಕ್ಟ್ ಒಂದರ ಉತ್ಪಾದನೆ ಮತ್ತು ನಿರ್ವಹಣೆಗಾಗಿ. ಅವರ ಉತ್ಪನ್ನ ಇನ್‌ಟ್ಯುಟೆಲ್ ಅನೇಕ ಕಂಪನಿಗಳಿಗೆ ಮಾರ್ಕೆಟಿಂಗ್ ನಿರ್ಧಾರಗಳನ್ನು ಕೈಗೊಳ್ಳಲು ಸಹಾಯ ಮಾಡುತ್ತಿದೆ.

ಸುಮಾರು 2014ರ ಹೊತ್ತಿಗೆ ಜ್ಯೋತಿರ್ಮಯಿ ತಮ್ಮ ಬೆಳವಣಿಗೆ ನಿರ್ದಿಷ್ಟ ಘಟ್ಟ ಮುಟ್ಟಿರುವುದನ್ನು ಕಂಡುಕೊಂಡರು ಇನ್ನಷ್ಟು ಮುಂದಕ್ಕೆ ಸಾಗುವ ಪರಿಯ ಬಗ್ಗೆ ಆಲೋಚಿಸುತ್ತಿದ್ದರು. ಇನ್ನಷ್ಟು ವಿಸ್ತರಣೆಯ ಅವರ ಹಂಬಲಕ್ಕೆ ಮ್ಯಾಡಿಸನ್ ಬೆಂಬಲವಾಗಿ ನಿಂತಿದೆ. ಮ್ಯಾಡಿಸನ್ ದೊಡ್ಡ ಪ್ರಮಾಣದ ಹೂಡಿಕೆ ಮಾಡಿದೆ ಎಂಬುದು ನಿಜವೇ. ಆದರೆ ಹೈವ್ ಮೈಂಡ್ಸ್ ಮತ್ತು ಮ್ಯಾಡಿಸನ್‌ನ ಸಂಬಂಧ ಪರಸ್ಪರ ಸಹಕಾರದ್ದು. ಜ್ಯೋತಿರ್ಮಯಿ ಅವರ ಒಳಗಿನ ಉದ್ಯಮಿ ತನ್ನ ಕನಸುಗಳಿಗೆ ಹೊಸ ರೆಕ್ಕೆಗಳನ್ನು ಜೋಡಿಸಲು ಆಗುವಂಥ ಈ ಪಾಲುದಾರಿಕೆ ಸಹಾಯ ಮಾಡುತ್ತಿದೆ. ವೇಗವಾಗಿ ಬೆಳೆಯುತ್ತಿರುವ ಡಿಜಿಟಲ್ ಕ್ಷೇತ್ರದಲ್ಲಿ ತಮ್ಮ ಅಚ್ಚಳಿಯದ ಹೆಜ್ಜೆಗಳನ್ನು ಮೂಡಿಸುವ ಹಾದಿಯಲ್ಲಿ ಜ್ಯೋತಿರ್ಮಯಿ ಸಾಗುತ್ತಿದ್ದಾರೆ.

# ಕವಿತಾ ಹುಷಾರೆ

ಕವಿತಾ ಹುಷಾರೆ ಸಮಾಜಕಾರ್ಯವನ್ನು ಅಧ್ಯಯನ ಮಾಡಿದ ಬೀದರ್‌ನ ಮೊದಲ ದಲಿತ ಯುವತಿ ಎಂಬ ವಿಶೇಷಣಕ್ಕೆ ಪಾತ್ರರಾದವರು. ಸಮಾಜಕಾರ್ಯ ಎಂಬುದು ಇವರ ಮಟ್ಟಿಗೆ ಕೇವಲ ಒಂದು ಪದವಿಯಷ್ಟೇ ಅಲ್ಲ. ಅದು ಸಮಾಜದ ಬದಲಾವಣೆಗೆ ಮಾಡಬೇಕಾಗಿರುವ ಕೆಲಸಕ್ಕಿರುವ ತರಬೇತಿ ಎಂಬುದು ಅವರ ಭಾವನೆ. ಪರಿಣಾಮವಾಗಿ ಅವರ ತಜ್ಞತೆಯ ಮಟ್ಟ ವಿಭಿನ್ನವಾದದ್ದು.



ಅವರು ನುಗ್ಗೆ ಸೊಪ್ಪಿನಿಂದ ಶಕ್ತಿಮದ್ದು ರೂಪದ ಪೇಯವನ್ನು (ಟಾನಿಕ್) ಮನೆಯಲ್ಲಿಯೇ ತಯಾರಿಸುವುದು ಹೇಗೆ ಎಂದು ಹೇಳಿಕೊಡುವುದರಲ್ಲಿ ಫೇಮಸ್. ಅಷ್ಟು ಮಾತ್ರವಲ್ಲ, ತಾವೇ ಹೆಣ್ಣುಮಕ್ಕಳ ಪಾಲಿಗೆ ತಾವೇ 'ಟಾನಿಕ್' ಆದವರು. ಬೆಲ್ಲದ ಜೊತೆಗೆ ಕೆಲವು ಒಣಹಣ್ಣುಗಳು ಹಾಗೂ ಬಾಡಿದ ನುಗ್ಗೆ ಸೊಪ್ಪನ್ನು ಸೇರಿಸಿ ರೂಪಿಸಿದ ಟಾನಿಕ್ ಅನ್ನು ಯಾವುದೇ ಶೀತಲಯಂತ್ರವನ್ನು ಬಳಸದಂತೆ ವರ್ಷ ಕಾಲ ಕೆಡದೆ ಇಡುವುದು ಹೇಗೆ ಎನ್ನುವುದನ್ನೂ ಮೇಡಂ ಹೇಳಿಕೊಡುತ್ತಾರೆ. ಪೌಷ್ಟಿಕಾಂಶಗಳಿಂದ ಸಮೃದ್ಧವಾದ ಈ ಟಾನಿಕ್ — ಮಕ್ಕಳಿಗೆ, ಹರಯದ ಹುಡುಗಿಯರಿಗೆ ಹಾಗೂ ತಾಯಂದಿರಿಗೆ ಅಮೃತಸಮಾನ ಎನ್ನುತ್ತಾರೆ. ನುಗ್ಗೆ ಗಿಡಕ್ಕೆ ಸಂಬಂಧಿಸಿದಂತೆ ಗಾ ್ರಮೀ ಣ

**ನಿರ್ವಹಣೆ:**
ಕೆ. ನರಸಿಂಹಮೂರ್ತಿ, ಕೋಡಿಬೆಟ್ಟು ರಾಜಲಕ್ಷ್ಮಿ, ಪದ್ಮನಾಭ ಭಟ್, ಕೆ. ಓಂಕಾರಮೂರ್ತಿ,
ಜೆ.ಕೆ. ಪ್ರಮೋದ್, ಪ್ರಶಾಂತ ಕುರ್ಕೆ, ಆದಿತ್ಯ ಕೆ.ಎ., ಎನ್.ಎ.ಎಂ. ಇಸ್ಮಾಯಿಲ್, ರಘುನಾಥ ಚ.ಹ.